ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಮೈಲಪ್ಪನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **28.08.14**

ಈ ವಾರದ ಮುನ್ಸೂಚನೆ (ದಿನಾಂಕ **29-08-14 to 02.09.14** ವರೆಗೆ)

ನಿಯತಾಂಕಗಳು	29.08.14	30.08.14	31.08.14	01.09.14	02.09.14
ಮಳೆ (ಮಿ ಮಿ)	6	7	8	4	0
ಗರಿಷ್ಠ ಉಷ್ಣಾಂಶ(ಡಿ.ಸೆ.)	25	26	26	27	27
ಕನಿಷ್ಠ ಉಷ್ಣಾಂಶ (ಡಿ.ಸೆ.)	19	19	19	19	19
ಮೋಡ (ಪ್ರಮಾಣ)	8	8	7	7	8
ಅರ್ದ್ರತೆ ೭.೨೦ ಬೆ (ಶೇ)	95	94	93	81	81
ಅರ್ದ್ರತೆ ೨.೨೦ ಮ (ಶೇ)	75	80	71	63	60
ಗಾಳಿಯ ವೇಗ (ಕಿ.ಮಿ/ಗಂಟೆಗೆ)	10	12	15	13	11
ಗಾಳಿಯ ದಿಕ್ಕು (ಡಿಗ್ರಿ)	250	240	240	240	240

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳಲ್ಲಿ ಸಾಧಾರಣ ಮಳೆಯ ಸಂಭವವಿದೆ ಎಂದು ವರದಿಯ ಪ್ರಕಾರ ತಿಳಿದುಬರುತ್ತದೆ. ದಿನದ ಗರಿಷ್ಠ ಉಷ್ಣಾಂಶವು **25.0-27.0°C** ಮತ್ತು ಕನಿಷ್ಠ **19°C** ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **81-95%** ಇದ್ದು, ಮಧ್ಯಾಹ್ನ **60-80 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **10-15** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಮಳೆಯ ಸಂಭವ ಇದ್ದು, ತೊಗರಿ, ರಾಗಿ, ಜೋಳ, ಮುಂತಾದ ಬೆಳೆಗಳಲ್ಲಿ ಅಂತರ ಬೇಸಾಯ ಮಾಡಿ ಕಳೆ ನಿಯಂತ್ರಣ ಮಾಡಲು ಸೂಚಿಸಲಾಗಿದೆ.
- ✓ ಬೆಳೆಗಳಿಗೆ ಗೊಬ್ಬರ ಕೊಡುವಾಗ ಮಣ್ಣಿನಲ್ಲಿ ಅದನ್ನು ಚೆನ್ನಾಗಿ ಸೇರಿಸಬೇಕು. ರೈತರು ಔಷಧಿ ಸಿಂಪಡಣೆಯನ್ನು ಮುಂದೂಡಬೇಕು
- ✓ ಹೊಲದಲ್ಲಿ ವಿಶೇಷವಾಗಿ ತರಕಾರಿ/ಹೂ ಬೆಳೆಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು.
- ✓ ಹೊಲದಲ್ಲಿ ಬಸಿಗಾಲುವೆಗಳನ್ನು ನಿರ್ಮಿಸಿ ನೀರು ಹರಿದು ಹೋಗುವಂತೆ ನೋಡಿಕೊಳ್ಳಬೇಕು.

ದ್ರಾಕ್ಷಿ: ಮೋಡ ಕವಿದ ವಾತಾವರಣ ಇದ್ದು, ಗಾಳಿಯಲ್ಲಿ ತೇವಾಂಶ ಹೆಚ್ಚಿಗೆ ಇರುವುದರಿಂದ ದ್ರಾಕ್ಷಿ ಹಾಗೂ ಇನ್ನಿತರೆ ಬಳ್ಳಿಯ ಬೆಳೆಗಳಲ್ಲಿ ಬೂಜು ರೋಗವು ಜಾಸ್ತಿಯಾಗುವ ಸಂಭವವಿದೆ.

- ✓ ಬೂಜು ರೋಗದ ನಿಯಂತ್ರಣಕ್ಕೆ ಶಿಲೀಂಧ್ರನಾಶಕಗಳಾದ ಮೆಟಲಾಕ್ಸಿಲ್+ಮ್ಯಾಂಕೊಜೆಬ್ ಅನ್ನು ಸಿಂಪಡಿಸಬೇಕು (ಆದಷ್ಟು ಮುಂಜಾನೆ ಸಮಯದಲ್ಲಿ ಸಿಂಪಡಿಸಬೇಕು).

ಗುಲಾಬಿ: ಕಬ್ಬಿಣದ ಕೊರತೆಯಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಹತೋಟಿ ಮಾಡಲು ಬಯೋ–೨೦ ಅಥವಾ ಮಲ್ಟಿಪ್ಲೆಕ್ಸ್ ನ ಲಘು ಪೋಷಕಾಂಶಗಳನ್ನು ಕೊಡಬೇಕು.

ಸಸ್ಯ ಸಂರಕ್ಷಣೆ: ಥ್ರಿಪ್ಸ್/ಹೇನು/ಎಫಿಡ್ಸ್ ಹಾಗೂ ಇನ್ನಿತರೆ ರಸ ಹೀರುವ ಕೀಟಗಳು ಮಳೆ ಜೋರಾಗಿ ಬಂದರೆ ನೈಸರ್ಗಿಕವಾಗಿ ನಿಯಂತ್ರಣಕ್ಕೆ ಬರುತ್ತವೆ. ಆದ್ದರಿಂದ ಔಷಧಿ ಸಿಂಪಡಣೆಯನ್ನು ಮಾಡದಿರುವುದು ಉತ್ತಮ.

ಸಹ ಸಂಶೋಧಕರು:
ಡಿ.ಶ್ರೀಧರ್

ನೋಡಲ್ ಅಧಿಕಾರಿ:
ಎನ್.ಎ.ಜನಾರ್ಧನಗೌಡ
ಬೆಂಗಳೂರು